# ಶತಮಾನದ ಸಂತ



■ ಪ್ರವೀಣ ಕುಲಕರ್ಣಿ

ದೇಶದಾದ್ಯಂತ ಧರ್ಮದ 'ಜ್ವರ' ಏರಿರುವ ಹೊತ್ತಿದು. ಇಂತಹ 'ಜ್ವರ'ವನ್ನು ಉಪಶಮನ ಮಾಡಿ, ತಂಪೆರೆಯುವಂತಹ ಒಂದು ಹೆಸರೆಂದರೆ ಅದು ಬಾಬೂಜಿ ಅವರದು. 'ಧರ್ಮದ ಕೊನೆಯೇ ಅಧ್ಯಾತ್ಮದ ಆರಂಭ' ಎಂದು ಸಾರಿದ ಬಾಬೂಜಿ, ಒಬ್ಬ ಸತ್ಯಾನ್ವೇಷಕ, ಸಹಜ ಮಾರ್ಗದಲ್ಲಿ ನಡೆದ ಸಂತ, 'ಢೋಂಗಿ ಬಾಬಾ'ಗಳ ನಡುವೆ ಭಾರತದ ನೈಜ ಆಧ್ಯಾತ್ಮಿಕ ಶಕ್ತಿಯನ್ನು ಜಗತ್ತಿಗೆ ತೋರಿದ ಮೇರು ಪುರುಷ. ಈ ಮಹಾನ್ ಯೋಗಿಯ 125ನೇ ಜನ್ಮದಿನದ ಸಂದರ್ಭ ಇದು. ಆ ನೆನಪಿನಲ್ಲಿ ಭಾರತೀಯ ಅಂಚೆ ಇಲಾಖೆಯು ವಿಶೇಷ ಅಂಚೆಚೀಟಿ ಹಾಗೂ ಲಕೋಟೆಯನ್ನು ಬಿಡುಗಡೆ ಮಾಡಿದೆ.

ಉತ್ತರ ಪ್ರದೇಶದ ಷಾಹಜಹಾನ್‌ಪುರದ ರಾಮಚಂದ್ರ (ಬಾಬೂಜಿ), ದೇಶದಾದ್ಯಂತ ಗೊಡ್ಡು ಆಚರಣೆಗಳ ವಿರುದ್ಧ ಸದ್ದಿಲ್ಲದೆ ಸಮರ ಸಾರಿದ್ದುದು, ಜಾಗೃತಿ ಮೂಡಿಸಿದ್ದುದು 'ಪತ್ರ ಚಳವಳಿ'ಯ ಮೂಲಕ. ದೇಶದ ಮೂಲೆ ಮೂಲೆಯಲ್ಲಿದ್ದ ಶಿಷ್ಯಂದಿರಿಗೆ ಅವರು ನಿಯಮಿತವಾಗಿ ಪತ್ರಗಳನ್ನು ಬರೆಯುತ್ತಿದ್ದರು. ಬೇರೂರಿದ್ದ ತಪ್ಪು ಕಲ್ಪನೆಗಳನ್ನೂ ನಿವಾರಿಸುತ್ತಿದ್ದರು. ಅದಕ್ಕೆ ಅಂಚೆ ಇಲಾಖೆಯೇ ಅವರಿಗೆ ಮಾಧ್ಯಮವಾಗಿತ್ತು. ಆ ನಿಟ್ಟಿನಲ್ಲಿ ಈಗ ವಿಶೇಷ ಅಂಚೆಚೀಟಿ, ಲಕೋಟೆ ಬಿಡುಗಡೆ ಮಾಡಿರುವುದು ಅರ್ಥಪೂರ್ಣ. ಅಧ್ಯಾತ್ಮದ ಬದುಕಿಗೊಂದು ಸಹಜ ಮಾರ್ಗವನ್ನೇ ಸೃಷ್ಟಿಸಿದ ಈ ಸಂತನ ಬೋಧನೆ ತುಂಬಾ ಸರಳ. ಆದರೆ, ಅಷ್ಟೇ ಗಹನ. 'ದೇವರನ್ನು ಹೃದಯದಲ್ಲಿ ಹುಡುಕಿ, ಪವಿತ್ರ ಗಳಿಕೆಯೊಂದೇ ಆದಾಯದ ಮೂಲವಾಗಿರಲಿ, ಜಗತ್ತಿನ ಎಲ್ಲರನ್ನೂ ಸಹೋದರ ಭಾವದಿಂದ ಕಾಣಿ, ಯಾರ ಬಗೆಗೂ ಕಹಿಭಾವ ಬೆಳೆಸಿಕೊಳ್ಳಬೇಡಿ, ನಿಸರ್ಗದ ನಿಯಮಗಳಿಗೆ ಅನುಗುಣವಾಗಿ ಬಾಳಿ' – ಅವರ ಒಟ್ಟು ಸಂದೇಶದ ಸಾರವನ್ನು ಹೀಗೆ ಹಿಡಿದಿಡಬಹುದು. ನೀವೇ ಹೇಳಿ, ನಮ್ಮ ಜಗತ್ತು ಇಂದು ಎದುರಿಸುತ್ತಿರುವ ಎಲ್ಲ ಬಿಕ್ಕಟ್ಟುಗಳಿಗೂ ಈ ಸಂದೇಶದಲ್ಲಿ ಪರಿಹಾರ ಇದೆಯಲ್ಲವೇ?

ಧಾರ್ಮಿಕ ಕೇಂದ್ರಗಳೇ ಇರಲಿ, ಆಧ್ಯಾತ್ಮಿಕ ಕೇಂದ್ರಗಳೇ ಇರಲಿ, ಅಲ್ಲೆಲ್ಲ ಹಣದ ಹೊಳೆಯೇ ಹರಿಯುವ ಕಾಲ ಇದು. ಅಂತಹ ಕೇಂದ್ರಗಳಲ್ಲಿ ನಡೆಯುವ 'ವ್ಯವಹಾರ'ಗಳ ಕುರಿತು ಪುಂಖಾನುಪುಂಖವಾಗಿ ಕಥೆಗಳು ಕೇಳಿಬರುತ್ತಿರುವ ಕಾಲವೂ ಹೌದು. ಬಾಬೂಜಿ ಅವರು ಆರಂಭಿಸಿದ 'ಶ್ರೀ ರಾಮಚಂದ್ರ ಮಿಷನ್'ಗೆ ಸ್ವಾತಂತ್ರ್ಯಪೂರ್ವದ ಆ ಕಾಲದಲ್ಲೇ ಪುಟ್ಟ ಪುಟ್ಟ ದೇಣಿಗೆ ಬರುತ್ತಿತ್ತು. ಮಿಷನ್‌ನ ಕಾರ್ಯಗಳಿಗಾಗಿ ಅವರು ಎಡೆಬಿಡದೆ ಪ್ರಯಾಣ ಮಾಡುತ್ತಿದ್ದರು. ಇಡೀ ದೇಶದಾದ್ಯಂತ ರೈಲಿನ ದ್ವಿತೀಯ ದರ್ಜೆ ಬೋಗಿಯಲ್ಲಿ ಅವರು ಸಂಚರಿಸುತ್ತಿದ್ದರು. ಪವಿತ್ರ ಗಳಿಕೆಯ ಒಂದು ಪೈಸೆಯೂ ಪೋಲಾಗಬಾರದು ಎಂಬುದು ಅವರ ಸ್ಪಷ್ಟ ಅಭಿಪ್ರಾಯವಾಗಿತ್ತು. ಏನೇ ಖರ್ಚು ಮಾಡಿದರೂ ಪ್ರತೀ ಪೈಸೆಯ ಲೆಕ್ಕವನ್ನು ಅವರು ಇಡುತ್ತಿದ್ದರು. ಒಂದೇ ಊರಿನ 2–3 ಶಿಷ್ಯಂದಿರಿಗೆ ಪತ್ರ ಬರೆದಾಗ ಒಂದೇ ಲಕೋಟೆಯಲ್ಲಿ ಇಟ್ಟು ಕಳುಹಿಸುತ್ತಿದ್ದರು. ವೆಚ್ಚಕ್ಕೆ ಕಡಿವಾಣ ಹಾಕುವ ಪ್ರತೀ ದಾರಿಯನ್ನೂ ಅವರು ಹುಡುಕುತ್ತಿದ್ದರು. ಷಾಹಜಹಾನ್‌ಪುರದಲ್ಲಿ ಮಿಷನ್ನಿನ ಕೇಂದ್ರದ ಕಟ್ಟಡ ನಿರ್ಮಾಣಕ್ಕಾಗಿ ತಮ್ಮ ಬದುಕಿನ ಎಲ್ಲ ಗಳಿಕೆಯನ್ನೂ ಅವರು ಧಾರೆ ಎರೆದಿದ್ದರು.

ಅಂದಹಾಗೆ, ಇಂದಿನ 'ಬಾಬಾ'ಗಳಂತೆ ಅವರೇನೂ ಕಾವಿ ತೊಟ್ಟು, ತಮ್ಮ ತಾಣದಲ್ಲಿ ಕಣ್ಮುಚ್ಚಿಕೊಂಡು ಕುಳಿತವರಲ್ಲ. ವೈಭೋಗದಲ್ಲಿ ಮೈಮರೆತವರಲ್ಲ. ನ್ಯಾಯಾಂಗ ಇಲಾಖೆಯಲ್ಲಿ ಗುಮಾಸ್ತರಾಗಿ ಸೇವೆ ಸಲ್ಲಿಸಿ, ನಿವೃತ್ತರಾದವರು. ಕಾಯಕದಲ್ಲಿದ್ದೇ ಯೋಗಿಯಾದವರು. 'ಅಧ್ಯಾತ್ಮದ ಸಾಧನೆಗೆ ಗೃಹಸ್ಥ ಜೀವನವೇ ಸಾಧನ' ಎಂದೂ ಸಾರಿದವರು. ಭಾರತದ 'ದಿ ಹಿಂದೂ' ಸೇರಿದಂತೆ ಜಗತ್ತಿನ ಹಲವು ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದ ಅವರು, ಮನುಷ್ಯನೊಳಗಿನ ಮಾಲಿನ್ಯವನ್ನು ತೊಳೆಯಲು ಸತತವಾಗಿ ಯತ್ನಿಸಿದವರು. ಹಿಂದೂ, ಮುಸ್ಲಿಂ, ಕ್ರೈಸ್ತ ಎಂದು ಭೇದಭಾವ ಎಣಿಸದೆ ಎಲ್ಲರಿಗೂ ಸಹಜ ಬದುಕಿನ ದಾರಿ ನೀಡಿದವರು. ನೂರು ಮತಗಳ ಹೊಟ್ಟು ತೂರಿ, ಎಲ್ಲ ತತ್ವಗಳ ಎಲ್ಲೆಯನ್ನು ಮೀರಿ ನಿಂತವರು. ಜಗತ್ತಿನಾದ್ಯಂತ ಈಗಲೂ ಲಕ್ಷಾಂತರ ಸಂಖ್ಯೆಯಲ್ಲಿ ಅವರ ಶಿಷ್ಯಬಳಗವಿದೆ.

ಮನುಷ್ಯರು, ಮನುಷ್ಯರಾಗಿ ಉಳಿದು, ದೈವತ್ವಕ್ಕೆ ಏರುವುದು ಹೇಗೆ? ಬಾಬೂಜಿಯವರು ಹೇಳುವ ಉಪಾಯ ತೀರಾ ಸರಳವಾಗಿದೆ. 'ನಾವು ಪ್ರತಿದಿನ ಮನೆಯನ್ನು ಗುಡಿಸಿ, ಸ್ವಚ್ಛಗೊಳಿಸುವುದಿಲ್ಲವೇ? ಹಾಗೆ ಹೃದಯದ ಮೇಲೆ ಆಗುವ ನಿತ್ಯದ ಪರಿಣಾಮಗಳನ್ನು ರಾತ್ರಿ ಮಲಗುವ ಮುನ್ನ ಸ್ವಚ್ಛಗೊಳಿಸಬೇಕು. ಈ ಶುದ್ಧೀಕರಣ ಮತ್ತು ಹೃದಯದಲ್ಲಿ ದೈವಿಪ್ರಕಾಶವಿರುವ ಭಾವದಿಂದ ಬೆಳಗ್ಗೆ ಮಾಡುವ ಧ್ಯಾನ ನಿಮ್ಮೊಳಗಿನ ಮನುಷ್ಯತ್ವವನ್ನು ಜಾಗೃತಗೊಳಿಸುತ್ತದೆ' ಎನ್ನುವುದು ಅವರ ಉಪದೇಶ. ಪ್ರಕೃತಿದತ್ತವಾದ ಸರಳ ಆಹಾರವೂ ಅವರ ಸಲಹೆಗಳಲ್ಲಿ ಒಂದು. ಇಂತಹ ಸಹಜ ಬದುಕಿನ ಹರಿಕಾರ ಮತ್ತೊಬ್ಬ ಸಿಗುವುದು ದುರ್ಲಭ. ಷಾಹಜಹಾನ್‌ಪುರದಲ್ಲಿ ಇಂದಿಗೂ ಅವರ ಪುಟ್ಟ ಮನೆ ಹಾಗೇ ಇದೆ. ಅದು, ಅಲ್ಲಿ ಬಾಳಿ ಬದುಕಿದ ಮಹಾನ್ ಸಂತನ ಕಥೆಯನ್ನು ಹೇಳುತ್ತಿದೆ. ಹೃದಯವೇ ಮಂದಿರವಾಗಬೇಕು ಎನ್ನುವ ಅವರ ಮಾತು, ಮಂದಿರಗಳ ಗಂಟಾನಾದದ ನಡುವೆಯೂ ಎಲ್ಲೆಡೆ ಕೇಳಿಸುತ್ತಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65